INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-7, Issue -2, March--April, 2025,
PageNo,01- 08
Peer -Reviewed, Refereed Journal

# ಸಾಮಾಜಿಕ ಪ್ರಜ್ಞೆಯ ಕಾದಂಬರಿ 'ಗ್ರಾಮಾಂತರ'

ಶ್ವೇತ. ಎಸ್.[1]

"ಸಾಮಾಜಿಕ ಪ್ರಜ್ಞೆ ಈಚೆಗೆ ವಿಮರ್ಶೆಗಳಲ್ಲಿ ಹೆಚ್ಚು ಹೆಚ್ಚಾಗಿ ಕೇಳಿ ಬರುತ್ತಿರುವ ಮಾತು. ಸಾಹಿತಿಗಳಿಗೆ ಸಾಮಾಜಿಕ ಪ್ರಜ್ಞೆ ಇರಬೇಕು, ಆ ಪ್ರಜ್ಞೆ ಇಲ್ಲದವನು ಕವಿ ಅಥವಾ ಸಾಹಿತಿ ಎನಿಸಿಕೊಂಡರೂ ಉತ್ತಮ ಕವಿ ಅಥವಾ ಸಾಹಿತಿ ಎನಿಸಿಕೊಳ್ಳಲಾರ. ಕವಿಗೆ ಸಾಮಾಜಿಕ ಹೊಣೆಗಾರಿಕೆ ಇರಬೇಕು. ಸೋಶಿಯಲ್ ಕಮಿಟ್ಮೆಂಟ್ ಇಲ್ಲದೆ ಬರೆಯುವ ಸಾಹಿತಿಯ ಕೃತಿಗಳಿಂದ ಏನು ಪ್ರಯೋಜನ"[I] ಎಂಬ ಚಿದಾನಂದಮೂರ್ತಿಯವರ ಮಾತು ಇಂದಿಗೆ ಬಹಳ ಪ್ರಸ್ತುತ ಎನಿಸುತ್ತದೆ.

ಸಾಹಿತ್ಯ ಸಮಾಜದಿಂದ ವಿಷಯ, ವಸ್ತುಗಳನ್ನು ಸ್ವೀಕರಿಸುತ್ತದೆ. ಮಾತ್ರವಲ್ಲ ಬದುಕಿನ ವಿಭಿನ್ನ ಮುಖಗಳನ್ನು ಕುರಿತು ಚಿಂತಿಸುವ, ಚಿತ್ರಿಸುವ ಒಂದು ಪ್ರಭಾವಶಾಲಿ ಮಾಧ್ಯಮವಾಗಿದೆ. ಸಾಹಿತಿಯು ತನ್ನ ಬರವಣಿಗೆಯ ಮೂಲಕ ಸಮಾಜವನ್ನು ಸುಧಾರಿಸುವ ಕ್ರಮ, ಸಾಹಿತ್ಯದ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯ ಪ್ರಾಚೀನ ಕಾಲದಿಂದಲೂ ನಡೆಯುತ್ತಲೇ ಬಂದಿದೆ. ಆ ಕಾರ್ಯವನ್ನೇ ಡಿಎನ್ಕೆ ತಮ್ಮ ಕಾದಂಬರಿಗಳ ಮೂಲಕ ಮಾಡುವ ಪ್ರಯತ್ನ ಮಾಡಿದ್ದಾರೆ. ಸಮಾಜದ ವಾಸ್ತವಿಕ ಚಿತ್ರಣಗಳನ್ನು ಒಳಗೊಂಡ, ಮುಖ್ಯವಾಗಿ ಸಮಾಜವನ್ನು ಸುಧಾರಿಸಿ, ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವ ಪ್ರಯತ್ನ ಇವರ ಕಾದಂಬರಿಗಳಲ್ಲಿ ಕಂಡುಬರುತ್ತದೆ.

ನೈತಿಕ ಗುಣಗಳು ಮರೆಯಾಗಿ ಅನೈತಿಕತೆ ಎಲ್ಲೆಡೆ ತಾಂಡವವಾಡುತ್ತಿರುವ ಇಂದಿನ ದಿನಗಳಲ್ಲಿ ಡಿಎನ್ಕೆ ಅವರ ಕಾದಂಬರಿಗಳ ಮೌಲ್ಯಗಳು ಸಮಾಜಕ್ಕೆ ಉತ್ತಮ ಸಂದೇಶಗಳನ್ನು ರವಾನಿಸುವುದರ ಜೊತೆಗೆ ನೈತಿಕ ಸಮಾಜವನ್ನು ನಿರ್ಮಿಸಲು ಉಪಯುಕ್ತವಾಗಿವೆ. ಸಾಹಿತ್ಯವನ್ನು ಒಂದು ಅಸ್ತ್ರವಾಗಿ ಬಳಸಿಕೊಳ್ಳ ಬೇಕೆನ್ನುವ ಇವರು 'ಕಲೆಗಾಗಿ ಕಲೆಯಲ್ಲ ಕಲೆಯು ಜೀವನಮುಖಿಯಾಗಿರಬೇಕು, ಸಮಾಜದ ಪರಿವರ್ತನೆಗಾಗಿ ಸಾಹಿತ್ಯ ಒಂದು ಸಾಧನವಾಗಬೇಕು'ಎಂಬ ಉದ್ದೇಶದಿಂದ ಬರೆಯುತ್ತಿರುವವರು.

---

[1] ,ಸಂಶೋಧಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮಾನಸ ಗಂಗೋತ್ರಿ,ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು

'ಗ್ರಾಮಾಂತರ' ಗ್ರಾಮೀಣ ಪ್ರದೇಶದ ಜನರ ಸಾಮಾಜಿಕ ಹಾಗೂ ರಾಜಕೀಯ ಬದುಕಿನ ವೈಪರೀತ್ಯವನ್ನು ಸೂಕ್ಷ್ಮವಾಗಿ ಅನಾವರಣಗೊಳಿಸಿರುವ ಕೃತಿಯಾಗಿದೆ. ಸಿ.ಪಿ.ಕೆ.ಯವರು "ಪ್ರಕೃತ ಗ್ರಾಮಾಂತರ ಡಿ.ಎನ್.ಕೃಷ್ಣಮೂರ್ತಿಯವರ ಒಂದು ವಿಶಿಷ್ಟ ಕಾದಂಬರಿ. ಮುಖ್ಯವಾಗಿ ರಾಜಕೀಯ ಕಾದಂಬರಿ ಎಂದು ಕರೆಯಬಹುದಾದ ಬರವಣಿಗೆ. ಇಲ್ಲಿನ ವಸ್ತು ಗ್ರಾಮರಾಜಕೀಯ. ಆದರೆ ರಾಜ್ಯ ರಾಷ್ಟ್ರಗಳ ರಾಜಕೀಯಕ್ಕಿಂತ ಅದೇನು ಭಿನ್ನವಲ್ಲ. ಇದರಲ್ಲಿ ಗ್ರಾಮಜೀವನದ ಚಿತ್ರಣ ದಟ್ಟವಾಗಿ ಮತ್ತು ಸಹಜ ನೈಜವಾಗಿ ಮೂಡಿಬಂದಿದೆ"[2]ಎಂದಿದ್ದಾರೆ.

ಡಿಎನ್ಕೆ ಅವರ ಕಾದಂಬರಿಗಳಲ್ಲಿ ಸಮಕಾಲೀನ ಸಮಾಜವನ್ನು ಚಿತ್ರಿಸುವ ಪ್ರಯತ್ನವಿದೆ. ಸಮಕಾಲೀನ ಸಮಸ್ಯೆಗಳು ಮತ್ತು ಸಾಮಾನ್ಯ ಜನರ ಜೀವನದ ವಾಸ್ತವಿಕ ನೆಲೆಯ ಚಿತ್ರಣವಿದೆ. ಇವರು ತಮ್ಮ ಕಣ್ಣಳತೆಯಲ್ಲಿ ನಡೆಯುವ ವಿವಿಧ ರೀತಿಯ ಅನ್ಯಾಯಗಳನ್ನು ವಿರೋಧಿಸುತ್ತಾ ಬಂದಿದ್ದಾರೆ. ಹೊಣೆಗಾರಿಕೆ ಇಲ್ಲದ ಜನಪ್ರತಿನಿಧಿಗಳ ಜಡತ್ವವನ್ನು ಕಟುವಾದ ಮಾತುಗಳಿಂದ ಖಂಡಿಸಿ, ತಮ್ಮ ಬರವಣಿಗೆಯ ಮೂಲಕ ನಾಡಿನ ಪ್ರಜ್ಞಾವಂತರನ್ನು ಎಚ್ಚರಿಸುವ ಪ್ರಾಮಾಣಿಕ ಪ್ರಯತ್ನಮಾಡಿದ್ದಾರೆ.

'ಭಾರತ ಹಳ್ಳಿಗಳ ದೇಶ. ಇಲ್ಲಿನ ಬಹುಪಾಲು ಜನ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವುದು. ಈ ದೇಶದಲ್ಲಿ ಅನಕ್ಷರತೆ ತಾಂಡವ ಮಾಡುತ್ತಿದೆ. ಅಕ್ಷರಸ್ಥರ ಕೊರತೆ ಇದ್ದು, ಮೌಢ್ಯ ತುಂಬಿ ತುಳುಕುತ್ತಿದೆ. ಇಲ್ಲಿ ಜಾತಿ ವ್ಯವಸ್ಥೆ ತಾಂಡವ ಮಾಡುತ್ತಿದೆ. ಆಡಳಿತ ವ್ಯವಸ್ಥೆಯ ಪ್ರಮುಖ ರೂವಾರಿಗಳಾಗಿರುವ ರಾಜಕಾರಣಿಗಳು ಜಾತೀಯತೆಯನ್ನು ಬೆಳೆಸಿ ಪೋಷಿಸಿದ್ದಾರೆ. ಮೂಲಭೂತವಾಗಿ ಸಾವಿರಾರು ಜಾತಿ ಉಪಜಾತಿ ಹಾಗೂ ವಿವಿಧ ಧರ್ಮಗಳ ಸಂಗಮವಾಗಿರುವ ಈ ದೇಶ ವಿವಿಧತೆಯಲ್ಲಿ ಏಕತೆಯನ್ನು ಪ್ರತಿಬಿಂಬಿಸುವ ಒಂದು ವಿಶಾಲ ನೆಲೆಗಟ್ಟಿನ ಸಂಸ್ಕೃತಿಯನ್ನು ಹೊಂದಿದೆ. ಆದರೆ ರಾಜಕೀಯದ ವಿಚಾರಕ್ಕೆ ಬಂದರೆ ಮಾತ್ರ ಜನ ಅವರಿಗೆ ಅರಿವಿಲ್ಲದಂತೆ ಈ ವಿಶಾಲ ಸಂಸ್ಕೃತಿಯಿಂದ ಆಚೆ ಬಂದುಬಿಡುತ್ತಾರೆ. ಅಧಿಕಾರದಲ್ಲಿರುವ ತಮ್ಮ ತಮ್ಮ ಜಾತಿಯವರಿಗೆ ಅವರ ಬೆಂಬಲ ನಿರಾಯಾಸವಾಗಿ ಸಿಕ್ಕಿಬಿಡುತ್ತದೆ. ಚುನಾವಣೆಗಳಲ್ಲಿ ಜಾತಿ ಆಧಾರದ ಮೇಲೆ ಮತ ಚಲಾಯಿಸುವ ಹುಮ್ಮಸ್ಸು ಬಹುತೇಕ ಎಲ್ಲ ವರ್ಗದ ಜನರಲ್ಲೂ ಬೇರುಬಿಟ್ಟಿದೆ. ಇದು ಹೀಗೆ ಮುಂದುವರೆದರೆ ದೇಶಕ್ಕೆ ಅಪಾಯ ಖಂಡಿತ'ಎನ್ನುವ ಲೇಖಕರು ಈ ಕಾದಂಬರಿಯ ರಚನೆಯಲ್ಲಿ ಕೇವಲ ಮನೋರಂಜನೆಯನ್ನು ಮೂಲ ಉದ್ದೇಶವಾಗಿ ಇಟ್ಟುಕೊಳ್ಳದೆ, ಗ್ರಾಮೀಣ ಜನರ ಜೀವನ ಸುಧಾರಣೆಯ ಬಗೆಗೆ ಚಿಂತನೆ ಮಾಡಿದ್ದಾರೆ. ಅವರ ಬದುಕಿನ ಒಳಿತು ಕೆಡಕುಗಳನ್ನು ವಿಮರ್ಶಿಸಿದ್ದಾರೆ. ಕಾದಂಬರಿಯಲ್ಲಿ ಈ ದೇಶದ ಗ್ರಾಮೀಣ ಪರಿಸರವನ್ನು, ಅಲ್ಲಿನ ದೌರ್ಬಲ್ಯ ಅಥವಾ ಸಾಫಲ್ಯತೆಗಳನ್ನು ಸಂಕೇತಿಕವಾಗಿ ಪ್ರತಿಬಿಂಬಿಸಲಾಗಿದೆ. ಅಲ್ಲಿನ ರಾಜಕೀಯ ಹಾಗೂ ರಾಜಕೀಯೇತರ ಮೌಲ್ಯಗಳು ಹಾಗೂ ಅಪಮೌಲ್ಯಗಳನ್ನು ಅವಲೋಕಿಸಲಾಗಿದೆ.

"ಸರ್ಕಾರದ ಕೆಲಸ ದೇವರ ಕೆಲಸ ಎಂಬ ನಾಮಫಲಕವನ್ನು ತೂಗುಹಾಕಿರುವ ಇಂತಹ ಕಚೇರಿಗಳಲ್ಲಿ ದೇವರು ಪ್ರತ್ಯಕ್ಷವಾಗುವವರೆಗೆ ಪ್ರಾಮಾಣಿಕವಾಗಿ ಕೆಲಸ ಕಾರ್ಯಗಳು ನಡೆಯುವುದಿಲ್ಲ. ರೈತ ಈ ದೇಶದ ಬೆನ್ನೆಲುಬು ಎಂಬ ನಾಮಫಲಕ ಬಾಗಿರುವ ಬೆನ್ನಿನ ಗುಳಿಬಿದ್ದ ಕೆನ್ನೆಯ ರೈತರ ಸಂಕಷ್ಟಗಳನ್ನು ನಿವಾರಿಸುವುದಿಲ್ಲ"[3]ಎನ್ನುತ್ತಾರೆ.

"ಇನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಅವ್ಯವಸ್ಥೆಯ ಆಗರ. ಅಲ್ಲಿಗೆ ಬರುವ ರೋಗಿಗಳು ವೈದ್ಯರ ಮುಖವನ್ನು ನೋಡಿ ಅದೆಷ್ಟು ದಿನಗಳಾಗಿವೆಯೋ? ಯಾವಾಗ ಬಂದರೂ ನರ್ಸ್ ಹಾಗೂ ಕಾಂಪೌಂಡರ್ ಮಾತ್ರ ಇರುತ್ತಾರೆ. ಇತ್ತೀಚೆಗೆ ಆರೋಗ್ಯ ಕೇಂದ್ರದ ವೈದ್ಯರನ್ನು ದೊಡ್ಡ ಆಸ್ಪತ್ರೆಯ ಹೊರ ರೋಗಿಗಳ ವಿಭಾಗಕ್ಕೆ ತಾತ್ಕಾಲಿಕವಾಗಿ ನಿಯೋಜಿಸಲಾಗಿದೆ. ಹೀಗಾಗಿ ವೈದ್ಯ ಮಹಾಶಯನ ಮುಖ ನೋಡಿ ಸಾಕಷ್ಟು ದಿನಗಳಾಯಿತು ಎಂದು ರೋಗಿಗಳು ಹಾಗೂ ಅವರ ಕಡೆಯವರು ಮಾತನಾಡಿಕೊಳ್ಳುವುದುಂಟು" [4] ಎಂಬ ಮಾತುಗಳು ನಮ್ಮ ಸ್ಥಳೀಯ ಸರ್ಕಾರಿ ಕಚೇರಿಗಳ ದುರವಸ್ಥೆಯನ್ನು ಬಟಾ ಬಯಲು ಮಾಡಿವೆ.

ಪ್ರಸ್ತುತ ಕಾದಂಬರಿ ಲೇಖಕರ ಸಾಮಾಜಿಕ ಪ್ರಜ್ಞೆ, ಸಮಕಾಲೀನ ಸಮಸ್ಯೆಗಳ ಬಗೆಗೆ ಅವರಿಗಿರುವ ಕಳಕಳಿಯನ್ನು ಅಭಿವ್ಯಕ್ತಿಸುತ್ತದೆ. ಜಾತಿಯತೆ ಮತ್ತು ವರ್ಗ ತಾರತಮ್ಯಗಳ ವಿರುದ್ಧ ದನಿಯತ್ತುತ್ತದೆ. ಸಮಾಜದ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಅವಕಾಶ ದೊರೆಯಬೇಕು ಎಂಬ ದೂರ ದೃಷ್ಟಿಯಿಂದ ಜಾರಿಗೆ ತರಲಾದ 'ಮೀಸಲಾತಿ ವ್ಯವಸ್ಥೆ' ನಿರೀಕ್ಷಿತ ಮಟ್ಟದಲ್ಲಿ ಪರಿಣಾಮಕಾರಿಯಾದ ಫಲಿತಾಂಶ ನೀಡದಿರುವ ಬಗ್ಗೆ ಇಲ್ಲಿ ಆತಂಕವಿದೆ. ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಶೋಷಣೆಗೆ ಒಳಗಾಗುತ್ತಿರುವವರ ಬಗ್ಗೆ ಅನುಕಂಪವಿದೆ. ರಾಜಕೀಯದಲ್ಲಿ ಮೀಸಲಾತಿ ಬಂದ ನಂತರವೂ ಸ್ಥಳೀಯ ಸಂಸ್ಥೆಗಳ ಅಧಿಕಾರದಲ್ಲಿ ನೆಪಮಾತ್ರಕ್ಕೆ ಶೋಷಿತರನ್ನು ಮುಂದಿಟ್ಟುಕೊಂಡು ಅಧಿಕಾರ ನಡೆಸುವ ಭ್ರಷ್ಟರು, ಬಂಡವಾಳಶಾಹಿಗಳು, ಕುತಂತ್ರಿಗಳು ಮತ್ತು ಪುಡಾರಿಗಳ ಬಗ್ಗೆ ಸಮಾಜಕ್ಕೆ ಇದು ಎಚ್ಚರಿಕೆಯ ಗಂಟೆ. ಗ್ರಾಮೀಣ ಬದುಕು, ಅಲ್ಲಿನ ರಾಜಕೀಯ ಮತ್ತು ಅಧಿಕಾರಿಗಳ ಕಾರ್ಯವೈಖರಿಯ ಸಂಪೂರ್ಣ ಚಿತ್ರಣವನ್ನು ಕಾದಂಬರಿ ಅತ್ಯಂತ ವಾಸ್ತವಿಕ ನೆಲೆಯಲ್ಲಿ ಕಟ್ಟಿಕೊಡುತ್ತದೆ.

ಈ ದೇಶದಲ್ಲಿ ಕೃಷಿ ಸಾಮಾನ್ಯ ಜನಜೀವನದ ಪ್ರಧಾನವಾದ ಭಾಗವಾಗಿದೆ. ಬರಹಗಾರರು ಸ್ವತಃ ಕೃಷಿಕರಾದ್ದರಿಂದ ಕೃಷಿ ಸಂಬಂಧವಾದ ವಿಚಾರಸರಣಿ ಸಹಜವಾಗಿಯೇ ಅವರ ಬರಹದಲ್ಲಿ ಕಂಡುಬರುತ್ತದೆ. ಇಂತಹ ಬರಹಗಳಲ್ಲಿ ಕೃಷಿಯಿಂದ ಬಾಧಿತರಾದವರ ಪರಿಸ್ಥಿತಿಗಳನ್ನು ಕುರಿತ ಕಾಳಜಿಗಳು ಪ್ರಧಾನವಾಗಿ ಕಂಡುಬರುತ್ತವೆ.

ರೈತರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಲ್ಲಿ ಒಂದಾದ ವಿದ್ಯುತ್ತಿನ ಅಸಮರ್ಪಕ ಪೂರೈಕೆಯ ಬಗ್ಗೆ ಕಾದಂಬರಿ ಬೆಳಕು ಚೆಲ್ಲುತ್ತದೆ. ತಂತ್ರಜ್ಞಾನದ ಯುಗದಲ್ಲಿ ಬದುಕುತ್ತಿದ್ದರೂ ಇಂದಿಗೂ

ನಮ್ಮ ಅನ್ನದಾತ ಹಲವಾರು ಸಮಸ್ಯೆಗಳ ಸುಳಿಯಲ್ಲಿ ಜೀವಿಸುತ್ತಿದ್ದಾನೆ. ರೈತರ ಆತ್ಮಹತ್ಯೆಯ ಸಂಖ್ಯೆ ಏರುತ್ತಿದೆ. ಮಳೆಯಾಧಾರಿತ ಭಾರತದ ಕೃಷಿಪದ್ಧತಿಯಿಂದ ವ್ಯವಸಾಯ ಜೂಜಾಗಿದೆ. ಹಾಗಾಗಿ ರೈತರು ಸಾಲ ಮಾಡಿ ಪಂಪ್ಸೆಟ್ಗಳನ್ನು ಹಾಕಿಸಿಕೊಂಡರೂ ವಿದ್ಯುತ್ತಿನ ಕೊರತೆಯಿಂದ ಮತ್ತೆ ಸಂಕಷ್ಟಕ್ಕೀಡಾಗಿದ್ದಾರೆ. ಇಂದಿಗೂ ನಮ್ಮ ಹಳ್ಳಿಗಳಲ್ಲಿ ಇಂತಹ ಪರಿಸ್ಥಿತಿ ಸುಧಾರಿಸಿಲ್ಲ.

"ನೋಡಿ ಸಾರ್ ನಮ್ಮ ಜನ ಲಕ್ಷಾಂತರ ರೂಪಾಯಿ ಸಾಲ ಮಾಡಿ ಅವರ ಜಮೀನುಗಳಿಗೆ ಪಂಪ್ಸೆಟ್ ಹಾಕಿಸ್ಕೊಂಡಿರೋದು ಅವರ ಬಡತನ ನೀಗುಸ್ಕೊಂಡು ದೇಶದ ಆರ್ಥಿಕ ಪರಿಸ್ಥಿತಿನ ಸುಧಾರ್ಸೋರ್ಕೋಸ್ಕರ. ಆದರೆ ನೀವು ದಿನಕ್ಕೆ ಎರಡು ಗಂಟೆನೂ ಕರೆಂಟ್ ಕೊಡದೆ ಅನ್ಯಾಯ ಮಾಡ್ತಿದ್ದೀರಿ ಇದು ನ್ಯಾಯಾನ?"[5]ಎಂಬ ದೇವರಾಜನ ಮಾತುಗಳು ಹಳ್ಳಿಗಳ ಪರಿಸ್ಥಿತಿಯನ್ನು ತಿಳಿಸುತ್ತದೆ.

"ರೈತ ಭೂಮಿಯನ್ನು ಉತ್ತು ಬಿತ್ತಿ ಬೆಳೆದು ಈ ಜಗತ್ತಿನ ಜೀವರಾಶಿಗಳನ್ನು ಸಲಹುತ್ತಾನೆ. ಆದರೆ ಅಂತಹ ರೈತ ಈ ದೇಶದಲ್ಲಿ ಸುಖವಾಗಿರುವನೇ ಎಂಬ ಪ್ರಶ್ನೆಗೆ ಉತ್ತರ ಹೇಳಬೇಕಾದವರು ಐಶಾರಾಮಿ ಬಂಗಲೆಗಳಲ್ಲಿ, ಎಸಿ ಕಾರುಗಳಲ್ಲಿ ಮೆರೆಯುತ್ತಿದ್ದಾರೆ. ಅದು ಈ ದೇಶದ ರೈತರ ದುರ್ದೈವ"[6]ಹೀಗೆ ರೈತರ ಬವಣೆ, ರೈತಪರ ಕಾಳಜಿ ಕಾದಂಬರಿಯುದ್ದಕ್ಕೂ ಕಂಡು ಬರುತ್ತದೆ.

ಕಾದಂಬರಿ ವೈಚಾರಿಕ ಹಿನ್ನೆಲೆಯಿಂದ ಕೂಡಿದ್ದು ಸಮಾಜದ ನ್ಯೂನತೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಸಮಾಜ ಪ್ರಜ್ಞೆ ಮತ್ತು ಸಮಕಾಲೀನ ವ್ಯವಸ್ಥೆಯ ದೋಷಗಳನ್ನು ಎತ್ತಿ ಹಿಡಿದು ಅವುಗಳಿಗೆ ಸೂಕ್ತ ಪರಿಹಾರ ಕಲ್ಪಿಸುವ ಸೂಕ್ಷ್ಮ ಅಂಶಗಳನ್ನು ಚಿತ್ರಿಸಿದೆ.

"ಮುಖ್ಯಮಂತ್ರಿಗಳೇನೋ ರೈತರ ಪರವಾಗಿ ಒಳ್ಳೆ ನಿರ್ಧಾರಗಳನ್ನೇ ತಗೊಳ್ತಿದ್ದಾರೆ ಸ್ವಾಮಿ. ಆ ನಿರ್ಧಾರಗಳು, ಅವರು ಕೊಡುವ ಸವಲತ್ತುಗಳು ರೈತರಿಗೆ ತಲುಪೋವಷ್ಟರಲ್ಲಿ ಈ ಮಧ್ಯವರ್ತಿಗಳು ಅವುಗಳನ್ನು ಕಬಳಿಸ್ಬಿಡ್ತಾರೆ ಅದಕ್ಕೇನು ಮಾಡೋಣ ಹೇಳಿ"[7]

"ಹಾಗಂದ್ರೆ ಹೇಗ್ರಿ ಸಾಹೇಬ್ರೆ. ಒಂದೇ ಕಡೆ ನಿರ್ಧಾರ ತಗೊಂಡ್ರಾಗುತ್ತಾ ಹೇಳಿ. ಒಂದು ಊರು ಅಂದ್ಮೇಲೆ ಅಲ್ಲಿ ಎರಡು ಪಾರ್ಟಿ ಇದ್ದೇ ಇರುತ್ತೆ. ಹಾಗಂತ ಒಂದೇ ಕಡೆಯವರಿಗೆ ಮಾತ್ರ ಸರ್ಕಾರಿ ಸವಲತ್ತು ಸಿಗೋ ಹಾಗಾದ್ರೆ ಈ ಪ್ರಜಾಪ್ರಭುತ್ವ ಯಾಕೆ? ಈ ಜನತಂತ್ರದ ವ್ಯವಸ್ಥೆ ಯಾಕೆ? ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಹಾಕುವಂತಹ ಕೆಟ್ಟ ಸಂಪ್ರದಾಯ ಬೆಳೆಸೋಕೆ ನಿಮ್ಮಂಥ ಪ್ರಾಮಾಣಿಕ ಅಧಿಕಾರಿಗಳು ಅವಕಾಶ ಕೊಡಬಾರದು" [8] ಎಂದು ತಾಲ್ಲೂಕು ಪಂಚಾಯಿತಿ ಕಚೇರಿಯ ಅಧಿಕಾರಿಗೆ ದೇವರಾಜ ಹೇಳುವ ಮಾತಿನಲ್ಲಿ ದೇಶದ ವ್ಯವಸ್ಥೆ ದುರವಸ್ಥೆಯಲ್ಲಿರುವ ಹತಾಶೆ ಕಂಡುಬರುತ್ತದೆ.

"ಮೂಡಲೂರಿನಲ್ಲಿರುವಂತೆಯೇ ಎಲ್ಲ ಊರುಗಳಲ್ಲೂ ರಾಜಕೀಯವಿದೆ. ನ್ಯಾಯ, ನೀತಿ ಎತ್ತಿ ಹಿಡಿಯುವವರು ಒಂದು ಗುಂಪಾದರೆ, ಅನ್ಯಾಯವನ್ನೇ ಮಾಡುತ್ತಾ ಅವಿದ್ಯಾವಂತರನ್ನು, ಹಿಂದುಳಿದವರನ್ನು, ಬಡವರನ್ನು ತುಳಿಯುತ್ತಾ ತಮ್ಮ ಬೇಳೆ ಬೇಯಿಸಿಕೊಳ್ಳುವ ಪಟೇಲ ಹಾಗೂ

ರಾಜೇಂದ್ರನಂತವರು ಪ್ರತಿ ಹಳ್ಳಿಗಳಲ್ಲಿ ಇದ್ದೇ ಇರುತ್ತಾರೆ"[9] ಎಂದು ಲೇಖಕರು ನಮ್ಮ ದೇಶದ ಹಳ್ಳಿಗಳ ರಾಜಕೀಯ ಪರಿಸ್ಥಿತಿಯನ್ನು ಹೇಳಿದ್ದಾರೆ.

ರಾಜಕೀಯ ದುರಂತ ಕೌಟುಂಬಿಕ ದುರಂತ ಒಂದಕ್ಕೆ ಎಡೆಗೊಡುವ ವಿಷಮ ವಿಪರ್ಯಾಸವನ್ನು ಲೇಖಕರು ಪ್ರಭಾವಶಾಲಿಯಾಗಿ ನಿರೂಪಿಸಿದ್ದಾರೆ. ಚುನಾವಣೆಗಳು, ಮೀಸಲಾತಿ ಮುಂತಾದವುಗಳ ರೂಪದಲ್ಲಿ ಗ್ರಾಮೀಣ ಜಗತ್ತಿನಲ್ಲಿ ಉಂಟಾಗುತ್ತಿರುವ ಜಾಗೃತಿ ಸ್ವಾಗತಾರ್ಹವಾದರೂ, ಸದ್ಯದಲ್ಲಿ ಜನತೆಯ ಅನಕ್ಷರತೆ, ದಲ್ಲಾಳಿಗಳ ಹಾವಳಿ ಮೊದಲಾದ ನಾನಾ ಕಾರಣಗಳಿಂದ ಅದು ದುರುಪಯೋಗ ಗೊಳ್ಳುತ್ತಿರುವ, ದುಷ್ಪರಿಣಾಮ ಬೀರುತ್ತಿರುವ ಬಗೆಯನ್ನು ಲೇಖಕರು ಕೃತಿಯಲ್ಲಿ ಸ್ವಾನುಭವ ಪೂರ್ವಕವಾಗಿ ದಾಖಲಿಸಿದ್ದಾರೆ. ರತ್ನಿಯಂತಹ ಮುಗ್ಧ ಮಹಿಳೆಯರು ರಾಜೇಂದ್ರನಂತಹ ಪುಡಾರಿಗಳಿಗೆ ಬಲಿಯಾಗುವ ಚಿತ್ರಣ, ಅಮಾಸೆಯಂತಹ ಕೆಳವರ್ಗದವರು ಕುಡಿತದ ಚಟಕ್ಕೆ ಬಲಿಯಾಗಿ ತಮ್ಮ ಜೀವವನ್ನು ಕಳೆದುಕೊಳ್ಳುವಂತಹ ವಿಚಾರಗಳನ್ನು ತಿಳಿಸಿದ್ದಾರೆ.

ಕಾದಂಬರಿಕಾರರು ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಸ್ಥಿತ್ಯಂತರಗಳನ್ನು ಉಂಟುಮಾಡುತ್ತಿರುವ ರಾಜಕೀಯವೆಂಬ ಪೆಡಂಭೂತಕ್ಕೆ ಹೇಗೆ ಮುಗ್ಧ ಜನರ ಬದುಕು ಸಿಲುಕುತ್ತಿದೆ ಎಂಬುದನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. "ಕಾಲದಿಂದ ಕಾಲಕ್ಕೆ ತುಳಿತಕೊಳಗಾಗುತ್ತಿರುವ ತಮ್ಮಂಥವರಿಗೂ ಈ ಸಮಾಜದಲ್ಲಿ ಒಂದು ನಿರ್ದಿಷ್ಟವಾದ ಸ್ಥಾನಮಾನ ದೊರೆಯಬೇಕೆಂಬ ಹಂಬಲದಿಂದಿರುವ ಅವರು ಎಂಎಲ್ಎ ಗುರುಪಾದಪ್ಪನಂತಹವರಿಂದ ಅದು ಈಡೇರಬಹುದೆಂಬ ನಿರೀಕ್ಷೆಯಲ್ಲಿದ್ದರು."[10] ಇಂತಹ ಸಾಲುಗಳಲ್ಲಿ ಸಮಾಜದಲ್ಲಿನ ಶೋಷಿತರ ಪರ ಕಾಳಜಿ ವ್ಯಕ್ತವಾಗುತ್ತದೆ.

'ಗ್ರಾಮಾಂತರ' ಕಾದಂಬರಿಯಲ್ಲಿ ಲೇಖಕರ ಪ್ರಗತಿಪರ ಧೋರಣೆ ಅಭಿವ್ಯಕ್ತವಾಗಿದೆ. "ನಮ್ಮ ದೇಶದಲ್ಲಿ ಪ್ರಸ್ತುತ ನಡೆಯುತ್ತಿರುವ ರಾಜಕೀಯ ಪರಿಸ್ಥಿತಿ, ಜನಜೀವನ, ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳು, ಅಭಿವೃದ್ಧಿ ಹೆಸರಿನಲ್ಲಿ ಜನರಿಗೆ ಮಾಡುತ್ತಿರುವ ಮೋಸ.[11]

"ಇದನ್ನು ಸರಿಪಡಿಸಬೇಕಾದರೆ ಮನಸ್ಸು ಮಾಡಬೇಕು. ಸರ್ಕಾರ ಜನರಿಗೆ ಇಲ್ಲಸಲ್ಲದ ಆಶ್ವಾಸನೆಗಳನ್ನು ಕೊಡೋದು ನಿಲ್ಲಿಸಿ, ಹಳ್ಳಿಗಳ ಪ್ರಗತಿಗೋಸ್ಕರ ಸರಿಯಾದ ಕಾರ್ಯಕ್ರಮಗಳನ್ನು ಹಾಕೋಬೇಕು. ಆ ಕಾರ್ಯಕ್ರಮಗಳು ಜನರಿಗೆ ನೇರವಾಗಿ ತಲುಪುವ ವ್ಯವಸ್ಥೆ ಮಾಡಬೇಕು. ತಪ್ಪು ಮಾಹಿತಿ ಕೊಟ್ಟು ಜನರನ್ನು ವಂಚಿಸುವಂಥ ಪುಡಾರಿಗಳಿಗೆ, ಮಧ್ಯವರ್ತಿಗಳಿಗೆ ಬುದ್ಧಿ ಕಲಿಸಬೇಕು."[12] ಇಂತಹ ಅನೇಕ ವಿಚಾರಗಳಿಂದ ಗ್ರಾಮಾಂತರ ಕಾದಂಬರಿ ಬೋಧಪ್ರದವಾಗಿದೆ.

ಈ ಸಮಾಜದ ಈ ದೇಶದ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಅವಕಾಶ ದೊರೆಯಬೇಕೆಂಬ ದೂರದೃಷ್ಟಿಯಿಂದ ಜಾರಿಗೆ ತರಲಾದ ಮೀಸಲಾತಿ ವ್ಯವಸ್ಥೆಯ ಅಡ್ಡ ಪರಿಣಾಮಗಳನ್ನು ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಅದರಲ್ಲೂ ರಾಜಕೀಯದಲ್ಲಿ ಮೀಸಲಾತಿ ಬಂದ ನಂತರವಂತೂ ಸ್ಥಳೀಯ ಸಂಸ್ಥೆಗಳ

ಅಧಿಕಾರದಲ್ಲಿ ನೆಪಮಾತ್ರಕ್ಕೆ ಅವರನ್ನು ಮುಂದಿಟ್ಟುಕೊಂಡು ತಾವೇ ಅಧಿಕಾರ ನಡೆಸುವ ಭ್ರಷ್ಟರು, ಬಂಡವಾಳಶಾಹಿಗಳು, ಕುತಂತ್ರಿಗಳು, ಪುಡಾರಿಗಳು ಪ್ರತಿ ಹಳ್ಳಿಗಳಲ್ಲೂ ಕಾಣಸಿಗುತ್ತಾರೆ. ಅಂತಹ ಹಿನ್ನೆಲೆಯಲ್ಲಿ ರೂಪಿತವಾಗಿರುವ ಗ್ರಾಮಾಂತರ ಕಾದಂಬರಿ ವಾಸ್ತವದ ನೆಲೆಗಟ್ಟಿನಲ್ಲಿ ಪ್ರಾಮಾಣಿಕವಾಗಿ ಚಿಂತಿಸುವ ಪ್ರಜ್ಞಾವಂತ ಬರಹಗಾರನೊಬ್ಬನ ಮನದಾಳದ ಪರಿಕಲ್ಪನೆ ಎಂದರೆ ತಪ್ಪಾಗಲಾರದು. ಗ್ರಾಮೀಣ ಬದುಕಿನ ಜೊತೆಗೆ ಅಲ್ಲಿನ ರಾಜಕೀಯ ಮೇಲಾಟ, ಅಧಿಕಾರ ಲಾಲಸೆಗಳ ಸಂಪೂರ್ಣ ಚಿತ್ರಣವನ್ನು ಪ್ರತಿಬಿಂಬಿಸುವ ಪ್ರಾಮಾಣಿಕ ಪ್ರಯತ್ನ ಇದಾಗಿದೆ. ಸಮಾಜವನ್ನು, ಸಮುದಾಯವನ್ನು ಸಂಕಷ್ಟಕ್ಕೆ ಈಡು ಮಾಡಿರುವ ಸಂಗತಿಗಳು, ಬರಹಗಾರರ ಮನಸ್ಸಿನಲ್ಲಿ ಹುಟ್ಟುಹಾಕಿದ ತುಮುಲಗಳು ಚಿಂತನೆಯ ರೂಪ ಪಡೆದಿದೆ. ತಮ್ಮ ಕಾಳಜಿಯ ಸಂಗತಿಗಳನ್ನು ಬೆರೆಸಿ ಹೊರ ಜಗತ್ತಿನೊಂದಿಗೆ ಅದನ್ನು ಹಂಚಿಕೊಳ್ಳುವ ಪ್ರಯತ್ನ ಮಾಡಿದ್ದಾರೆ.

ಕಾದಂಬರಿಯಲ್ಲಿ ಹಲವು ರೀತಿಯ ಪಾತ್ರಗಳನ್ನು ಕಾಣಬಹುದು. ಕಥೆಯ ಮುಖ್ಯ ಪಾತ್ರಗಳಾದ ಮತ್ತು ಯಾರದೋ ಸ್ವಾರ್ಥಕ್ಕೆ ತಮ್ಮ ಜೀವ ಮತ್ತು ಜೀವನ ಎರಡನ್ನೂ ಕಳೆದುಕೊಳ್ಳುವ ಅಮಾಸೆ ಮತ್ತು ರತ್ನಿ ಗ್ರಾಮೀಣ ಪ್ರದೇಶಕ್ಕೆ ರಾಜಕೀಯ ಕಾಲಿಟ್ಟ ನಂತರ ಅಲ್ಲಿನ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳ ಪ್ರತೀಕಗಳಾಗಿ ಕಂಡುಬರುತ್ತಾರೆ.

ಎಂಎಲ್ಎ ಗುರುಪಾದಪ್ಪನಿಂದ ಹಿಡಿದು ಗ್ರಾಮದ ಅತ್ಯಂತ ಮುಗ್ಧ ಜೀವಿಗಳಾದ ರತ್ನಿ, ಅಮಾಸೆಯನ್ನು ತನ್ನ ಸ್ವಾರ್ಥಕ್ಕಾಗಿ ವಂಚಿಸುತ್ತಾ ಬರುವ ರಾಜೇಂದ್ರನ ಪಾತ್ರ ಕಾದಂಬರಿಯಲ್ಲಿ ಬಹು ಮುಖ್ಯವಾಗಿ ಕಂಡುಬರುತ್ತದೆ. ಹಳ್ಳಿಯ ವಿಧವೆಯರಿಗೆ ಮಾಸಾಶನ ಕೊಡಿಸುವ ರಾಜೇಂದ್ರ
"ಇದಕ್ಕೊಂದು ಹೆಬ್ಬೆಟ್ಟು ಒತ್ಬುಡು, ಆದರೆ ತಿಂಗಳಾ ತಿಂಗಳಾ ಎಣಿಸ್ಕಳುವಾಗ ನನ್ನ ಕಮಿಷನ್ ಬಂದ್ಬುಡಬೇಕು"[13]ಎಂಬ ಅವನ ಮಾತು ಮತ್ತು ಹಳ್ಳಿಯವರು ಅವನನ್ನು 'ಮುಂಡೇರ ಗಂಡ' ಎಂದು ಕರೆಯುತ್ತಿದ್ದದು ರಾಜೇಂದ್ರನ ವ್ಯಕ್ತಿತ್ವವನ್ನು ತಿಳಿಸುತ್ತದೆ. ಇಂದು ಪ್ರತಿ ಹಳ್ಳಿ ನಗರಗಳಲ್ಲಿಯೂ ಇಂಥ ದಲ್ಲಾಳಿಗಳ, ಮಧ್ಯವರ್ತಿಗಳ ಕಪಿಮುಷ್ಠಿಯಲ್ಲಿ ಜನ ಅನಿವಾರ್ಯವಾಗಿ ಸಿಲುಕಿರುವುದನ್ನು ಧ್ವನಿಸುತ್ತದೆ.
ಹಿಂದುಳಿದ ಸಮುದಾಯಕ್ಕೆ ಸೇರಿದ್ದರೂ ಕಷ್ಟಪಟ್ಟು ನಗರದ ಕಾಲೇಜಿನಲ್ಲಿ ಓದಿ ಪದವಿ ಗಳಿಸಿದ ಅಮಾಸನ ತಮ್ಮ ರಾಜ ಅಧಿಕಾರ, ಕೀರ್ತಿ ಗಳಿಸಬೇಕೆಂಬ ಹಂಬಲವಿದ್ದರೂ ಇತ್ತ ಜೀವನಕ್ಕೆ ಒಂದು ಸರಿಯಾದ ಮಾರ್ಗವಿಲ್ಲದೆ ತಲೆತಪ್ಪಿಸಿಕೊಂಡು ಓಡಾಡುವ ಅತಂತ್ರ ಸ್ಥಿತಿ ತಂದುಕೊಳ್ಳುತ್ತಾನೆ. ಕೀರ್ತಿ ಅಧಿಕಾರ ಎಂಬುದು ಎಲ್ಲರಿಗೂ ಸುಲಭವಾಗಿ ಕೈಗೆಟುಕದ ಗಗನ ಕುಸುಮ ಎಂಬುದನ್ನು ಅರಿಯದ ರಾಜನಂಥ ನೂರಾರು ಯುವಕರು ನಮ್ಮ ಸುತ್ತಮುತ್ತ ಕಾಣಸಿಗುತ್ತಾರೆ. ಅಂಥವರು ತಾವು ಗಳಿಸಿದ ವಿದ್ಯೆಯಿಂದ ತಮ್ಮ ಸಮುದಾಯಕ್ಕೆ ಏನಾದರೂ ಕೊಡುಗೆ ಕೊಡಬೇಕೆಂಬ ತಿಳಿವಳಿಕೆಗಿಂತ ತಮ್ಮ ಸ್ವಂತ ಲಾಭಕ್ಕಾಗಿ ಹಂಬಲಿಸುವುದು ವಿಪರ್ಯಾಸವಾಗಿದೆ. ಜಾತಿಯನ್ನು ಹೋಗಲಾಡಿಸಲು ಪ್ರಯತ್ನಿಸಬೇಕಾದ

ವಿದ್ಯಾವಂತರು ಜಾತಿಯನ್ನೇ ತಮ್ಮ ಬೆಳವಣಿಗೆಯ ದಾಳವನ್ನಾಗಿಸಿಕೊಳ್ಳಲು ಪ್ರಯತ್ನಿಸುವುದು ನಮ್ಮ ಸಮಾಜದ ದುರಂತ ಎಂಬುದನ್ನು ಈ ಪಾತ್ರ ಧ್ವನಿಸುತ್ತದೆ. ರಾಜನನ್ನು ಆದರ್ಶ ನಾಯಕನನ್ನಾಗಿ ಚಿತ್ರಿಸುವುದಕ್ಕಿಂತ ನಮ್ಮ ಹಳ್ಳಿಗಳಲ್ಲಿ ಈ ರೀತಿಯ ಅತಂತ್ರ ಸ್ಥಿತಿಯಲ್ಲಿ ಬದುಕುತ್ತಿರುವ ಯುವಕರೇ ಹೆಚ್ಚಾಗಿರುವುದು ನಿಜ ವಾಸ್ತವ. ಅವರ ಪ್ರತಿನಿಧಿಯಾಗಿ ರಾಜ ಕಾಣಿಸುತ್ತಾನೆ. ಕಷ್ಟಪಟ್ಟು ಪದವೀಧರನಾದರೂ ಯಾವ ರೀತಿಯಲ್ಲೂ ತನ್ನ ಜೀವನವನ್ನು ನಿರ್ಧರಿಸಲಾಗದೆ, ಬದುಕನ್ನು ಕಟ್ಟಿಕೊಳ್ಳಲಾಗದೆ ಹೆಣಗುವ ಪಾತ್ರವಾಗಿದೆ.

ಗ್ರಾಮಾಂತರ ಕಾದಂಬರಿಯಲ್ಲಿ ಕುಡಿತದಿಂದಾಗುವ ದುಷ್ಪರಿಣಾಮಗಳನ್ನು ಚಿತ್ರಿಸುವ ಪ್ರಯತ್ನವಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಬಹುತೇಕ ಜನ ಕುಡಿತಕ್ಕೆ ದಾಸರಾಗಿದ್ದಾರೆ. ಚುನಾವಣೆಗಳು ಬಂದರಂತೂ ರಾಜಕೀಯ ಪಕ್ಷಗಳು ಹೆಂಡ ಸಾರಾಯಿ ಹಂಚಿ ಕುಡಿಯುವ ಜನರನ್ನು ತಮ್ಮತ್ತ ಸೆಳೆಯಲು ಪ್ರಯತ್ನಿಸುತ್ತವೆ. ಕುಡಿತದ ಚಟಕ್ಕೆ ಬಲಿಯಾಗಿ ಅದೆಷ್ಟೋ ಸಂಸಾರಗಳು ಹಾಳಾಗುತ್ತಿವೆ. ಈ ಕಾದಂಬರಿಯಲ್ಲಿ ಬರುವ ಅಮಾಸೆಯ ಸಂಸಾರ ಒಂದು ಸಾಂಕೇತಿಕ ಅಷ್ಟೇ.

"ಗ್ರಾಮಾಂತರ ಕಾದಂಬರಿಯಲ್ಲಿ ಲೇಖಕರ ಪ್ರಗತಿಪರ ಧೋರಣೆ ಅಭಿವ್ಯಕ್ತವಾಗಿದೆ, ಹಳ್ಳಿಗಳಲ್ಲಿರುವ ಒಳಿತು ಕೆಡುಕುಗಳನ್ನು ಪ್ರಕೃತಿ ವಿಕೃತಿಗಳನ್ನು ತೆರೆದ ಕಣ್ಣಿನಿಂದ ಕಂಡು ವಸ್ತುನಿಷ್ಠವಾಗಿ ಚಿತ್ರಿಕರಿಸಿರುವ ಗ್ರಾಮಾಂತರ ಒಂದು ಮಿನಿ ಗ್ರಾಮಭಾರತವೇ ಆಗಿದೆ. ಕೃಷ್ಣಮೂರ್ತಿಯವರ ಸಾಮಾಜಿಕ ಕಳಕಳಿಗೆ, ವೈಚಾರಿಕ ಚಿಂತನೆಗೆ, ಪ್ರೌಢ ಬರವಣಿಗೆಗೆ ಇದಕ್ಕಿಂತ ನಿದರ್ಶನ ಬೇಕಿಲ್ಲ."[14]ಎಂಬುದಾಗಿ ಕೃತಿಗೆ ಮುನ್ನುಡಿ ಬರೆದಿರುವ ಸಿ. ಪಿ. ಕೆ. ಅವರು ಅಭಿಪ್ರಾಯ ಪಡುತ್ತಾರೆ.

ಲೇಖಕರೇ ಹೇಳುವಂತೆ ಈ ಕಾದಂಬರಿ ಕೇವಲ ಮನರಂಜನೆಯ ಉದ್ದೇಶವನ್ನಿಟ್ಟುಕೊಂಡು ಬರೆದಿದ್ದಲ್ಲ. ಸಮಾಜದ ಡೊಂಕುಗಳಿಗೆ ಹಿಡಿದ ಕನ್ನಡಿ ಯಾಗಿದೆ. ಕಾದಂಬರಿ ಯುದ್ದಕ್ಕೂ ಲೇಖಕರ ಸಾಮಾಜಿಕ ಪ್ರಜ್ಞೆ, ಸಮಾಜದ ಬಗ್ಗೆ ತುಡಿವ ಮನಸ್ಸು, ಬುದ್ಧಿ ಹೆಚ್ಚು ಜಾಗೃತವಾಗಿರುವುದು ಗೋಚರಿಸುತ್ತದೆ. ಡಿಎನ್ಕೆ ಅವರ ಕೃತಿಗಳು ಪ್ರಸ್ತುತ ವಾಗುವುದು ಅವರ ಹಲವು ಕೃತಿಗಳಲ್ಲಿ ಕಂಡು ಬರುವ ಇಂತಹ ಸಾಮಾಜಿಕ ಕಳಕಳಿಯಿಂದಲೇ. ಇವರ ಕೃತಿಗಳು ಪಾತ್ರಗಳು ಮನರಂಜನೆಗಿಂತಲೂ ವಾಸ್ತವಕ್ಕೆ ತೀರ ಹತ್ತಿರವಾಗಿವೆ. ಒಟ್ಟಾರೆ ಕಾದಂಬರಿ ಸಾಮಾಜಿಕ ಕಳಕಳಿ, ರೈತರ ಬಗೆಗಿನ ಕಾಳಜಿ, ದಲಿತ ಮತ್ತು ಮಹಿಳೆಯರ ಪರವಾದ ಧ್ವನಿಯನ್ನು ಹೊಂದಿದೆ.

**ಅಡಿಟಿಪ್ಪಣಿಗಳು**

[1].ಡಾ.ಎಂ.ಚಿದಾನಂದಮೂರ್ತಿ, ಹೊಸತು ಹೊಸತು, ಪುಟ ಸಂಖ್ಯೆ 33, ಪ್ರಕಾಶನ –ಸ್ವಪ್ನ ಬುಕ್ ಹೌಸ್, ಬೆಂಗಳೂರು,1993

[2]. ಸಿ.ಪಿ.ಕೆ., ಗ್ರಾಮಾಂತರ, ಮುನ್ನುಡಿಯಲ್ಲಿ

[3].ಗ್ರಾಮಾಂತರ ಪುಟ 16

[4]. ಗ್ರಾಮಾಂತರ ಪುಟ 15, 16

[5]. ಗ್ರಾಮಾಂತರ ಪುಟ 17

[6]. ಗ್ರಾಮಾಂತರ ಪುಟ.13

[7]. ಅದೇ ಪುಟ 19

[8]. ಅದೇ ಪುಟ 101

[9]. ಅದೇ ಪುಟ 59

[10]. ಗ್ರಾಮಾಂತರ ಪುಟ 84

[11]. ಅದೇ ಪುಟ 109

[12]. ಗ್ರಾಮಾಂತರ ಪುಟ 122

[13]. ಗ್ರಾಮಾಂತರ ಪುಟ 35

[14]. ಸಿ.ಪಿ.ಕೆ., ಗ್ರಾಮಾಂತರ ಮುನ್ನುಡಿಯಲ್ಲಿ

## ಪರಾಮರ್ಶನ ಗ್ರಂಥಗಳು

1.ಗ್ರಾಮಾಂತರ–ಡಿ.ಎನ್.ಕೃಷ್ಣಮೂರ್ತಿ,ಪುನಶ್ಚೇತನಪ್ರಕಾಶನ, ದೊಡ್ಡಮಾರಗೌಡನಹಳ್ಳಿ,ಮೈಸೂರು, ಮೊದಲ ಮುದ್ರಣ 2010.

2.ಅವಲೋಕನ (ಸಾಹಿತ್ಯ ವಿಮರ್ಶೆಗಳು), ಬನ್ನೂರು ಕೆ. ರಾಜು, ಮೈಸೂರು,ಮೊದಲ ಮುದ್ರಣ 2016.

3.ಹೊಸತು ಹೊಸತು, ಡಾ.ಎಂ.ಚಿದಾನಂದಮೂರ್ತಿ ಪ್ರಕಾಶನ ಸ್ವಪ್ನ ಬುಕ್ ಹೌಸ್,ಬೆಂಗಳೂರು,1993.